# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 717 (777) |
| ಮಾನ್ಯ ಸದಸ್ಯರ ಹೆಸರು: | ಶ್ರೀ ವಿನಯ್ ಕಾರ್ತಿಕ್ ಪ್ರಕಾಶ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 21.08.2026 |
| ಉತ್ತರಿಸುವ ಸಚಿವರು: | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

***

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಹಲವು ಬಾರಿ ಆಂಬುಲೆನ್ಸ್ ವಾಹನಗಳನ್ನು ಚಾಲಕರು ತಮ್ಮ ವೈಯುಕ್ತಿಕ ಹಿತಾಸಕ್ತಿಗಳಿಗಾಗಿ ವೈದ್ಯಕೀಯ ತುರ್ತು ಸೇವಾ ನಿಯಮಗಳನ್ನು ತೂರಿ, ಕಾನೂನುಬಾಹಿರವಾದ ಕೆಲಸಗಳಿಗೆ ಬಳಸಿಕೊಳ್ಳುತ್ತಿರುವುದು, ಆಂಬುಲೆನ್ಸ್ ವಾಹನಗಳ ಚಾಲಕರು ಮದ್ಯಪಾನ ಮಾಡಿ ಹಾಗೂ ಫುಟ್ ಪಾತ್‌ಗಳ ಮೇಲೆ ವಾಹನ ಚಲಾಯಿಸುವುದು ಮತ್ತು ಟ್ರಾಫಿಕ್ ನಿಯಮಗಳನ್ನು ಗಾಳಿಗೆ ತೂರಿ ವೇಗದ ಮತ್ತು ನಿರ್ಲಕ್ಷದ ಚಾಲನೆ ಮಾಡುವುದರಿಂದ ಹಲವಾರು ಅಪಘಾತಗಳಿಗೆ ಆಂಬುಲೆನ್ಸ್ ಕಾರಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಚಾಲಕರೇ ಕಾರಣವಾಗುತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುತ್ತದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಕಾರ್ಯನಿರ್ವಹಿಸುತ್ತಿರುವ ಆಂಬ್ಯುಲೆನ್ಸ್ ಗಳಲ್ಲಿ ಕಳೆದ 3 ವರ್ಷಗಳಲ್ಲಿ ಒಟ್ಟು 59 ಆಂಬ್ಯುಲೆನ್ಸ್‌ಗಳು ಅಪಘಾತಕ್ಕೀಡಾಗಿದ್ದು, ಇದರಲ್ಲಿ ಗಾಯಗೊಂಡವರ ಒಟ್ಟು ಸಂಖ್ಯೆ 16 ಹಾಗೂ ಮರಣ ಹೊಂದಿದವರ ಸಂಖ್ಯೆ 08. ಸದರಿ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| (ಆ) | ಬಂದಿದ್ದಲ್ಲಿ ಕಳೆದ 3 ವರ್ಷಗಳಲ್ಲಿ, ಆಂಬುಲೆನ್ಸ್ ವಾಹನಗಳಿಂದ ಸಂಭವಿಸಿರುವ ಅಪಘಾತ ಪ್ರಕರಣಗಳ ಸಂಖ್ಯೆ ಎಷ್ಟು; ಸದರಿ ಅಪಘಾತಗಳಲ್ಲಿ ಮರಣ ಹೊಂದಿದ ಮತ್ತು ಗಾಯಗೊಂಡವರ ಸಂಖ್ಯೆ ಎಷ್ಟು (ವರ್ಷವಾರು ವಿವರಗಳನು ನೀಡುವುದು) | |
| (ಇ) | ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ಆಂಬುಲೆನ್ಸ್ ಸೇವೆಗಳನ್ನು ಒದಗಿಸಲು ಸರ್ಕಾರ ನಿಗದಿಪಡಿಸಿರುವ ನಿಯಮ, ಮಾನದಂಡ ಮತ್ತು ಷರತ್ತುಗಳೇನು; ಹಾಗೂ ಸದರಿ ಆಂಬುಲೆನ್ಸ್ ವಾಹನಗಳ ಚಾಲಕ ನೇಮಕಾತಿಗೆ ಪ್ರಸ್ತುತ ಅನುಸರಿಸುತ್ತಿರುವ ಮಾನದಂಡಗಳೇನು ಮತ್ತು ಅರ್ಹತೆಗಳೇನು; ಪ್ರತೀ ಚಾಲಕನು ನಿಗದಿಪಡಿಸಿರುವ ಅರ್ಹತೆಗಳನ್ನು ಹೊಂದಿದ್ದಾನೆಯೇ ಎಂದು ಖಾತರಿಪಡಿಸಿಕೊಳ್ಳಲು ಪ್ರಸ್ತುತ ಇರುವ ವ್ಯವಸ್ಥೆಗಳೇನು? | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಭಾರತ ಸರ್ಕಾರವು ರಾಷ್ಟ್ರೀಯ ಆಂಬ್ಯುಲೆನ್ಸ್ ಸೇವೆ (NAS) 2026 - ಕಾರ್ಯಾಚರಣಾ ಮಾರ್ಗಸೂಚಿಗಳನ್ನು ಪ್ರಕಟಿಸಲಾಗಿರುತ್ತದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಕಾರ್ಯನಿರ್ವಹಿಸುತ್ತಿರುವ ಆಂಬ್ಯುಲೆನ್ಸ್‌ಗಳಲ್ಲಿ ಕೇಂದ್ರ ಸರ್ಕಾರದಿಂದ ನಿಗದಿಪಡಿಸಿರುವ National Ambulance Services (NAS) ಮಾನದಂಡಗಳನ್ನು ಹಾಗೂ ಷರತ್ತುಗಳನ್ನು ಪಾಲಿಸಲಾಗುತ್ತಿರುತ್ತದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಆಂಬ್ಯುಲೆನ್ಸ್ ವಾಹನ ಚಾಲಕರ ಖಾಯಂ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳಡಿ ಚಾಲಕರನ್ನು ನೇಮಕಾತಿ ಮಾಡಲಾಗುತ್ತದೆ. ಖಾಲಿ ಇರುವ ಆಂಬ್ಯುಲೆನ್ಸ್ ಚಾಲಕರ |

| | | |
|---|---|---|
| | | ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವಾಗ SSLC ಉತ್ತೀರ್ಣರಾಗಿರುವ ಮತ್ತು Light Motor Vehicle (LMV) ಚಾಲನಾ ಪರವಾನಗಿಯನು ಹೊಂದಿರುವ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.<br><br>ಹಾಲಿ ಕಾರ್ಯನಿರ್ವಹಿಸುತ್ತಿರುವ ಅಂಬ್ಯುಲೆನ್ಸ್ ವಾಹನ ಚಾಲಕರು ಇಲಾಖೆಯು ನಿಗದಿಪಡಿಸಿರುವ ಅರ್ಹತೆಗಳನ್ನು ಹೊಂದಿರುತ್ತಾರೆ.<br><br>ಅಂಬ್ಯುಲೆನ್ಸ್ ವಾಹನ ಚಾಲಕರ ನೇಮಕಾತಿಗೆ ನಿಗದಿಪಡಿಸಿರುವ ಅರ್ಹತೆಗಳನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಆ.ಕು.ಕ. ಅಧಿಕಾರಿಗಳು ಖಾತರಿಪಡಿಸಿಕೊಳ್ಳುತ್ತಾರೆ. ಅದೇ ರೀತಿ, 10 8 ಆರೋಗ್ಯ ಕವಚ ಅಂಬ್ಯುಲೆನ್ಸ್ ವಾಹನ ಚಾಲಕರ ನೇಮಕಾತಿಗೆ ನಿಗದಿಪಡಿಸಿರುವ ಅರ್ಹತೆಗಳನ್ನು ಸೇವಾದಾರರ ಮೂಲಕ ಖಾತರಿಪಡಿಸಿಕೊಳ್ಳಲಾಗುತ್ತಿದೆ. |
| (ಈ) | ಹಲವು ಬಾರಿ ಆಂಬುಲೆನ್ಸ್ ವಾಹನಗಳಲ್ಲಿ ಅನಗತ್ಯವಾಗಿ ಮತ್ತು ನಿಯಮಬಾಹಿರವಾಗಿ ಕೆಂಪು ದೀಪ ಮತ್ತು ಸೈರನ್ ಬಳಕೆ ಮಾಡುವ ಮೂಲಕ ಚಾಲಕರು ಆಂಬುಲೆನ್ಸ್ ವಾಹನಗಳಿಗೆ ನೀಡಿರುವ ವಿಶೇಷ ಅನುಮತಿ / ವಿನಾಯಿತಿಗಳನು ದುರ್ಬಳಕೆ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಪದೇಪದೇ ಸಂಭವಿಸುತ್ತಿದ್ದು ಇದನು ತಡೆಯಲು ಸೂಕ್ತ ಹಾಗೂ ಅಗತ್ಯ ಕ್ರಮಗೇಳನು ತೆಗೆದುಕೊಳ್ಳಬೇಕಾದ ಅನಿವಾರ್ಯತ ಸೃಷ್ಟಿಯಾಗಿದ್ದು ಸರ್ಕಾರ ಈ ಕುರಿತು ವಹಿಸಲಿರುವ ಕ್ರಮಗಳೇನು; | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಂಬುಲೆನ್ಸ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.<br><br>ರಾಜ್ಯ ವಲಯದ ಹಾಗೂ 108-ಆರೋಗ್ಯ ಕವಚ ಅಡಿಯಲ್ಲಿ ಬರುವಂತಹ ಅಂಬ್ಯುಲೆನ್ಸ್‌ಗಳನ್ನು ವಿಲೀನಗೊಳಿಸಿ, ಸರ್ಕಾರಿ ಸ್ವಾಮ್ಯದ ಕೇಂದ್ರೀಕೃತ ಕಮಾಂಡ್ ಕಂಟ್ರೋಲ್ ಸೆಂಟರ್‌ನ್ನು ಭಾರತ ಸರ್ಕಾರದ 112 NG ERSS ತಂತ್ರಾಂಶ ಬಳಸಿಕೊಂಡು ಅನುಷ್ಠಾನಗೊಳಿಸಲಾಗಿದೆ. |
| (ಉ) | ಪ್ರಮಾಣಿತ ಕಾರ್ಯಾಚರಣೆಯ ಕಾರ್ಯವಿಧಾನಗಳನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವುದು ಹಾಗೂ ಸುರಕ್ಷಿತ ಮತ್ತು ಉತ್ತಮ ಗುಣಮಟ್ಟದ ಆಂಬುಲೆನ್ಸ್ ಸೇವೆಗಳು ಸಕಾಲದಲ್ಲಿ ಸರ್ವರಿಗೂ ಸಿಗುವಂತೆ ವ್ಯವಸ್ಥೆಯನ್ನು ರೂಪಿಸುವುದು ಮತ್ತು ನಿಯಮ ಉಲ್ಲಂಘನೆ ಪ್ರಕರಣಗಳನು ತಡೆಯಲು ಪರಿಣಾಮಕಾರಿಯಾದ ನಿಯಂತ್ರಣ ವ್ಯವಸ್ಥೆಯನು ಯಾವ ಕಾಲಮಿತಿಯೊಳಗೆ ರೂಪಿಸಲಾಗುವುದು? | ಪಾರದರ್ಶಕತೆ, ಸುರಕ್ಷಿತ ಮತ್ತು ಉತ್ತಮ ಗುಣಮಟ್ಟದ ಆಂಬುಲೆನ್ಸ್ ಸೇವೆಗಳು ಸಕಾಲದಲ್ಲಿ ಸರ್ವರಿಗೂ ಸಿಗುವಂತೆ ಈ ಕೆಳಕಂಡ ತಂತ್ರಾಂಶವನ್ನು ಅಳವಡಿಸಲಾಗಿದೆ.<br><br>• ಅಂಬ್ಯುಲೆನ್ಸ್‌ಗಳ ನೈಜ-ಸಮಯದ GPS ಟ್ರ್ಯಾಕಿಂಗ್<br>• Location Based System (LBS) ಮೂಲಕ ಕರೆಮಾಡುವವರ ಸ್ಥಳವನ್ನು ಸ್ವಯಂಚಾಲಿತವಾಗಿ ಗುರುತಿಸುವಿಕೆ<br>• Expected Time Arrival (ETA) ಲೆಕ್ಕಾಚಾರ ಸಹಿತ ಸಮೀಪದ ಆಂಬುಲೆನ್ಸ್ ಕಳುಹಿಸುವ ವ್ಯವಸ್ಥೆ<br>• ರೋಗಿಗೆ SMS ಮೂಲಕ ಮಾಹಿತಿ<br>• Mobile Data Terminal (MDT) ಟ್ಯಾಬ್ಲೆಟ್ ಮೂಲಕ ಡಿಜಿಟಲ್ Patient Care Record (PCR)<br>• ಡಿಸ್ಪ್ಯಾಚರ್ ಮತ್ತು ಆಂಬುಲೆನ್ಸ್ ನಡುವೆ ದ್ವಿಮಾರ್ಗ ಸಂವಹನ |

| | | |
|---|---|---|
| | | • ಆಸ್ಪತ್ರೆಗಳಿಗೆ ಪೂರ್ವ ಸೂಚನೆ<br>• ಘಟನೆಯ ಪೂರ್ಣ ಕಾಲರೇಖೆ ಟ್ರ್ಯಾಕಿಂಗ್<br>• ಪ್ರಕರಣ ಪ್ರಕಾರದ ಆಧಾರಿತ ಡಿಸ್ಪ್ಯಾಚ್ |

(ಯು.ಟಿ. ಖಾದರ್ ಫರೀದ್)

ಆಕುಕ 98 ಎಸ್‌ಬಿವಿ 2026

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು
ಕುಟುಂಬ ಕಲ್ಯಾಣ ಸಚಿವರು

| Annexure-1 | | | | | |
|---|---|---|---|---|---|
| **Accident Report of the State Ambulances in Last 03 financial years.** | | | | | |
| **Sl No** | **District Name** | **No Of Accidents** | **No of Casualties** | **No of Deaths** | **Remarks** |
| 1 | KARWAR | 4 | Nil | Nil | |
| 2 | BANGALORE RURAL | 0 | Nil | Nil | |
| 3 | KALABURGI | 3 | 1 | 1 | |
| 4 | HAVERI | 2 | 1 | 1 | |
| 5 | RAMANAGAR | 1 | Nil | Nil | |
| 6 | CHAMARAJANAGAR | 3 | 2 | 1 | |
| 7 | CHIKKABALLAPUR | 2 | Nil | Nil | |
| 8 | MANDYA | 3 | Nil | Nil | |
| 9 | SHIVAMOGGA | 4 | 2 | 1 | |
| 10 | CHIKKAMAGALUR | 3 | 1 | 1 | |
| 11 | KOLAR | 0 | Nil | Nil | |
| 12 | BIDAR | 2 | 2 | Nil | |
| 13 | UDUPI | 0 | Nil | Nil | |
| 14 | RAICHUR | 0 | Nil | Nil | |
| 15 | KODAGU | 1 | Nil | Nil | |
| 16 | GADAG | 0 | Nil | Nil | |
| 17 | BANGALORE URBAN | 4 | Nil | Nil | |
| 18 | BELAGAVI | 2 | Nil | Nil | |
| 19 | MANGALORE (DK) | 0 | 1 | Nil | |
| 20 | YADAGIRI | 4 | 2 | Nil | |
| 21 | DAVANAGERE | 0 | Nil | Nil | |
| 22 | KOPPAL | 1 | Nil | Nil | |
| 23 | VIJAYAPUR | 4 | Nil | Nil | |
| 24 | HASSAN | 4 | 1 | 2 | |
| 25 | BAGALKOT | 1 | 1 | Nil | |
| 26 | VIJAYANAGARA | 3 | 1 | Nil | |
| 27 | TUMKURU | 0 | Nil | Nil | |
| 28 | DHARWAD | 0 | Nil | Nil | |
| 29 | CHITRADURGA | 3 | 1 | 1 | |
| 30 | MYSORE | 5 | Nil | Nil | |
| 31 | BALLARI | 0 | Nil | Nil | |
| | TOTAL | 59 | 16 | 8 | |

ಉಪ ನಿರ್ದೇಶಕರು
ತುರ್ತು ವೈದ್ಯಕೀಯ ಸೇವೆಗಳು



File No. HFW/98/SBV/2026-HEALTH 2-HEALTH AND FAMILY WELFARE SEC (Computer No. 2268309)
Scanned with OKEN Scanner